**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**
**ದಿನಾಂಕಃ 13-08-2018.**

*ಪಾಟೀ ಸವಾಲು ಶ್ರೀ ಡಿ.ಕೆ.ಎಮ್ ವಕೀಲರಿಂದಃ*

ನಾನು ಬೆಂಗಳಗೂರಿನಲ್ಲಿ 15 ವರ್ಷಗಳಿಂದ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಕುಟುಂಬ ಸಮೇತ ನಾನು ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದೇವೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ಮೊದಲ ಹೆಂಡತಿಗೆ ಒಬ್ಬ ಮಗ, ನನ್ನ ತಾಯಿಗೆ ಇಬ್ಬರು ಮಕ್ಕಳು. ನನ್ನ ತಂದೆಗೆ 4 ಜನ ಸಹೋದರರು. ನನ್ನ ತಂದೆಯ ಸಹೋದರರು ಹಾಗೂ ನನ್ನ ತಂದೆ ಸ್ವತ್ತುಗಳನ್ನು ಭಾಗ ಮಾಡಿಕೊಂಡಿದ್ದಾರೆ. ಪ್ರತಿವಾದಿ ನನ್ನ ಚಿಕ್ಕಪ್ಪ. ನನ್ನ ತಂದೆಗೆ 51-31 ಅಡಿಯ ದನದ ಕೊಟ್ಟಿಗೆ ಮತ್ತು ಖಾಲಿ ನಿವೇಶನ ಬಂದಿದೆ. ನನ್ನ ತಂದೆ ಜೀವಂತ ಇದ್ದಾರೆ. ನನ್ನ ತಂದೆಯ ಸಹೋದರರ ನಡುವೆ ಆಗಿರುವ ವಿಭಾಗ ಪತ್ರ ನನ್ನ ತಂದೆಯ ಬಳಿ ಇರಬಹುದು. ನಮ್ಮ ಸೋದರರ ನಡುವೆ ವಿಭಾಗವಾಗಿಲ್ಲ. ನನ್ನ ತಂದೆ ತಾಯಿ ಊರಿನಲ್ಲಿ ವಾಸವಾಗಿದ್ದಾರೆ. ದಾವಾ ಸ್ವತ್ತು ಮೊದಲು ನನ್ನ ತಂದೆ ಬೋರೇಗೌಡರ ಹೆಸರಿನಲ್ಲಿತ್ತು.ನನ್ನ ತಂದೆಯ ಹೆಸರಿನಲ್ಲಿದ್ದ ದಾವಾ ಸ್ವತ್ತುಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಳ್ಳಲು ಯಾವುದೇ ಪತ್ರ ಬರೆದುಕೊಟ್ಟಿಲ್ಲ.

ದಾವೆಯನ್ನು 15-9 ಅಡಿಗಳಿಗೆ ಸಲ್ಲಿಸಿದ್ದೇನೆ. ಮನೆಯನ್ನು ಸೇರಿಸಿ ಈ ದಾವೆಯನ್ನು ಸಲ್ಲಿಸಿದ್ದೇನೆ. ಮನೆ ಮತ್ತು ನಿವೇಶನದ ಖಾತೆ ನಂಬರ್ ಗೊತ್ತಿಲ್ಲ. ದಾವೆಯನ್ನು ಜಾಗ ಬಿಟ್ಟುಕೊಡಬೇಕೆಂದು ಸಲ್ಲಿಸಿದ್ದೇನೆ. ಪ್ರತಿವಾದಿ 15 ಅಡಿಯನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಬಿಟ್ಟುಕೊಡಬೇಕೆಂದು ಅರ್ಜಿ ಸಲ್ಲಿಸಿದ್ದೇನೆ. ಪ್ರತಿವಾದಿಯು ಪೂರ್ವ-ಪಶ್ಚಿಮ 9 ಅಡಿ ಉತ್ತರ-ದಕ್ಷಿಣ 8 ½ ಅಡಿಯನ್ನು ದಾವಾ ಸ್ವತಿನಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ. ಪತಿವಾದಿ ದಾವಾ ಸ್ವತಿನ ದಕ್ಷಿಣ ದಿಕ್ಕಿನಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ. ದಾವಾ ಸ್ವತಿನಲ್ಲಿ ಪ್ರತಿವಾದಿ ಶೆಡ್ಡು ಕಟ್ಟಿಕೊಂಡಿದ್ದಾರೆ.

ದಾವಾ ಸ್ವತ್ತಿನ ಪೂರ್ವಕ್ಕೆ ನಾರಾಯಣಪ್ಪರವರ ದನದ ಕೊಟ್ಟಿಗೆ ಮತ್ತು ಖಾಲಿ ಜಾಗ. ಪಶ್ಚಿಮಕ್ಕೆ ನಮ್ಮದೇ ಕೊಟ್ಟಿಗೆ. ಉತ್ತರಕ್ಕೆ ಭೋಜಪ್ಪರವರ ಮನೆ. ದಕ್ಷಿಣಕ್ಕೆ ರಾಜಗೋಪಾಲ್ ರವರ ಶೆಡ್ಡು. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ರಸ್ತೆ ಇದೆ. ಸುಮಾರು 6 ಅಡಿ ಅಗಲ ಇದೆ.

ಈ ಸ್ವತ್ತು ಮಾಡಿಸಿಕೊಳ್ಳುವ ಮೊದಲು ಖಾತೆ ನನ್ನ ಹೆಸರಿಗೆ ಇತ್ತು. ನನ್ನ ಹಾಗೂ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಒ.ಎಸ್.ನಂ 586/2016 ನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಮತ್ತು ಪಂಚಾಯ್ತಿ ಅಧಿಕಾರಿಗಳು ಈ ಸ್ವತ್ತು ಮತ್ತು ಪಂಚಾಯ್ತಿ ದಾಖಲೆಗಳನ್ನು ನನ್ನ ಹೆಸರಿಗೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಸ್ತಿತ್ವದಲ್ಲಿ ಇಲ್ಲದ ಸ್ವತ್ತಿಗೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತನ್ನು ಒಡೆದು ಕೊಳ್ಳುವ ಸಲುವಾಗಿ ಸೂಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

*ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.*

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

*(ಎಸ್.ಚಿನ್ನಸ್ವಾಮಿ)*
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**